45 39 Rare b

ಶೀ: ಗೌಲ್ಯೋಧಾ

ಶೀ: ಗೌಲಿಂದ ಹೈ

ಪರಾಮರ್ಶನ ಗ್ರಂಥ

ಪೇ.ಸಂ: 091644

ಅಕ್ಷರ ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ.

1936

ಶಂಕರ ನಾರಾಯಣ. ವಿದ್ವಾನ್.

ಕ.ಪ. 41 B.

ವೇಣೀ ಗ್ರಂಥಮಾಲಾ ಪುಷ್ಪ ೧

ಗೊಲ್ಗೊಥಾ

ಪರಾಮರ್ಶೆಗಾಗಿ

ಗೋವಿಂದ ಪೈ.

BKI·1
PAI

ಬೆಲೆ: ೪ ಆಣೆ.

ವೇಣೀ ಪ್ರಕಟನಾಲಯ,
ರಥಬೀದಿ, ಮಂಗಳೂರು.

ಪುಷ್ಪ ೨.

ಸರಪಣಿ

(ಏಕಾಂಕ ನಾಟಕ ಸಂಗ್ರಹ)

ಲೇಖಕರು:—

ಶ್ರೀ। ಪೇಜಾವರ ಸದಾಶಿವರಾಯರು

ಬೆಲೆ ೦—೮—೦.

ಪುಷ್ಪ ೩.

ಪುರುಷ ಲಕ್ಷಣಂ

(ಎರಡು ಏಕಾಂಕ ವಿಡಂಬನ ರೂಪಕಗಳು)

ಲೇಖಕರು:—

ಶ್ರೀ। ಕುಡ್ಪಿ ವಾಸುದೇವ ಶೆಣೈ

ಮತ್ತು

ಶ್ರೀ। ಎಸ್. ಎನ್. ಹೊಳ್ಳ

ಬೆಲೆ ೦—೪—೦.

ದೊರೆಯುವ ಸ್ಥಳ:—

ತ್ರಿವೇಣೀ ಪ್ರಕಟನಾಲಯ,

ರಥಬೀದಿ, ಮಂಗಳೂರು.

ಅಮ್ಮೆಂಬಳ
ಕ.ಪ.41.ಬ.

ಗೊಲ್ಗೊಥಾ

ಅಥವಾ

ಯೇಸುವಿನ ಕಡೆಯ ದಿನ



ಗೋವಿಂದ ಪೈ

ಪರಾಮರ್ಶಕಾಗಿ

ಶ್ರೀವೇಣೀ ಪ್ರಕಟಣಾಲಯ, ಮಂಗಳೂರು.

1936

091644

8 K1.1
PAI g

ಮುದ್ರಕರು:—

ಮಂಗಳೂರು ಪ್ರೆಸ್, ರಥಬೀದಿ, ಮಂಗಳೂರು

ಕರ್ನಾಟಕ ವಿಶ್ವವಿದ್ಯಾಲಯ

With Compliments to
Mr. A. Shankar Narayana Rao
from
The Publishers

ನನ್ನ ತಮ್ಮಂದಿರ
ಮುದ್ದು ಮುಕ್ಕಳಿಗೆ

ಮುನ್ನುಡಿ

ಈ ಕವಿತೆ ೪-೫ ವರ್ಷಗಳ ಹಿಂದೆ ೧೯೩೧ನೆಯ ಜುಲಾಯಿಯಲ್ಲಿ ರಚಿತವಾಗುತ್ತಲೇ ಮಂಗಳೂರಿನ ಸ್ವದೇಶಾಭಿಮಾನಿಯು ಆಗೋಸ್ತು–ಸಪ್ತಂಬರ ತಿಂಗಳ ೪ ಸಂಚಿಕೆಗಳಲ್ಲಿ ಪಾಲಾಗಿ ಪ್ರಕಟವಾಯಿತು. ಆ ಮೇಲೆ ಇತ್ತೀಚೆಯ ಜನವರಿಯಲ್ಲಿ ತ್ರಿವೇಣಿಯ ಪ್ರಥಮಾಂಕದಲ್ಲಿಯೂ ಪ್ರಕಟವಾಯಿತು. ಆ ಬಗ್ಗೆ ಅವೆರಡೂ ಪತ್ರಿಕೆಗಳ ಸಂಪಾದಕ ಮಹಾಶಯರಿಗೂ ಅಲ್ಲಿಂದ ಕೆಲವೇ ತಿಂಗಳಲ್ಲಿ ಇದನ್ನು ಸ್ವತಂತ್ರವಾಗಿ ಪ್ರಕಟಿಸಲಿಕ್ಕೆ ಬಗೆತಂದು ಹಾಗೆ ಹೊರವಡಿಸಿರುವ ಬಗ್ಗೆ ಮಂಗಳೂರು ಛಾಪಖಾನೆಯ ಶ್ರೀ ಬಾಬುರಾಯ ಪ್ರಭುಗಳಿಗೂ ಚಿರಋಣಿಯಾಗಿರುತ್ತೇನೆ.

ಇದರ ಛಂದಸ್ಸನ್ನು ಕುರಿತು ಪ್ರಾಸಂಗಿಕವಾಗಿ ಒಂದು ಮಾತನ್ನು ಹೇಳುವುದಾದರೆ, ಕನ್ನಡದ ಆಯಾ ಪ್ರಾಂತಗಳಲ್ಲಿ ಸಕಾರಣವೋ ಅಕಾರಣವೋ ಆದ ಆಯಾ ಕೆಲವು ಹೆಸರುಗಳಿಂದ ಈಗೆ ಸಾಕಷ್ಟು ರೂಢಿಸಿರುವ ಈ ಛಂದಸ್ಸಿನ ಪ್ರತಿಚರಣದಲ್ಲಿ ೫–೫ ಮಾತ್ರೆಗಳ ೪–೪ ಗಣಗಳೂ ಪ್ರತಿಖಂಡದ ಕೊನೆಯ ಬಂತಿಯ ಅಂತಿಮಗಣದಲ್ಲಿ ಮಾತ್ರ ವಿರಾಮದ ಬಗ್ಗೆ ತಾನೆ ಗುರ್ವಂತವಾದ ೪ ಮಾತ್ರೆಗಳೂ ಇದ್ದು ಇದು ಝಂಪೆ ಎಂದು ಹೆಸರುವಾಸಿಯಾದ ತಾಳವನ್ನು ಇಷ್ಟು ಪ್ರತ್ಯಕ್ಷವಾಗಿ ಒಂದೇ ಒಂದು ಇಳಿಯಷ್ಟಾದರೂ ತಪ್ಪದೆ ಅನುಸರಿಸುವುದರಿಂದ, ಇದಕ್ಕೆ ಝಂಪೆ ಎಂಬ ಅನ್ವರ್ಥನಾಮವೇ ನೇರಾಗಿ ಒಪ್ಪುತ್ತದೆ ಎನ್ನಬೇಕು. ಈ ಬಗ್ಗೆ ತ್ರಿವುಡೆ ಎಂಬ ತಾಳಕ್ಕೆ ಒಡಗೂಡಿರುವುದರಿಂದ ತ್ರಿವುಡೆ ಎಂದು ಹೆಸರಾದ ಛಂದಸ್ಸಿನ ಉದಾಹರಣೆಯ (ರಾಜಶೇಖರ ವಿಲಾಸ XIII. ೧೨೧–೧೩೪) ಸಾಂಪ್ರದಾಯಿಕ ಆಧಾರವೂ ಬೇಕಾದಷ್ಟಿದೆ.

ಮಂಜೇಶ್ವರ.
ಧಾತೃ ಸಂ। ವಸಂತಪೂರ್ಣಿಮೆ.
೬ ಮೇ ೧೯೩೬.

ಗೋವಿಂದ ಪೈ.

ಗೊಲ್ಗೊಥಾ
ಅಥವಾ
ಯೇಸುವಿನ ಕಡೆಯ ದಿನ



ಕೋಳಿ ಮೂರನೆ ಬಾರಿ ಕೂಗಿ ಯೇಸುವ ಕೊಲ್ಲ
ಲೆಳಸಿದ ಯೆಹೂದ್ಯರ ಮನಸ್ಸಾಕ್ಷಿಯೊಲು ಸುಮ್ಮ
ನಾಗೆ, [1]ಕಾಯಫನಕಟ ನಡಸಿದ ವಿಚಾರಣೆಯ
ಕಟ್ಟನೀತಿಗೆ ಹೇಸಿ ಬೆಳುಗದಿರನಿಳಿವೋಗೆ,
ಜಗದ ಪಾಪದ ಸಾಲವಿಂದು ಹರಿದಪುದೆಂದು
ಸಾರೆ ತಂಗಾಳಿ ಸುತ್ತಲು ತೀಡೆ, ದಿವಕಿಂದು
ದೇವಕುವರಂ ಮರಳಿ ಬಹನೆಂಬ ಗೆಲುವಿಂದ
ದೇವದೂತರೆ ಬಾರಿಸುವರೊ ಮಂಗಲವಾದ್ಯ
ಮೆನಲು ಮುಂಬಕ್ಕಿಗಳ ಮೇಳವಂ ಮೊಳಗಾಡೆ,
ಇಂದಿನೀ ದುರ್ದಿನವ ಮೂಡಿಸುವೆನೆಂತೆಂಬ
ಚಿಂತೆಯಿಂದಿನನಂದು ಮುಗಿಲ ಮುಸುಕಂ ತೊಟ್ಟು
ಮೊಗಮರಸೆ, ನೇಸರಂ ಸೆರೆಬಿಗಿದು ರಾತ್ರಿಗೊ
ಪ್ಪಿಸುವ ಮೋಡದ ಗಡಣದಂತೆ ಕೈಸೆರೆವಿಡಿದ
ಯೇಸುವಂ [2]ಕೈಸರನ ಪ್ರತಿನಿಧಿ ಪಿಲಾತನರ
ಮನೆಗೊಯ್ದು, ತಾವಿನ್ನು [3]ಪಸ್ಕಹಬ್ಬವನುಣದೆ

1 ಯೆಹೂದ್ಯರ ಪ್ರಧಾನ ಯಾಜಕವಾದ ಕಾಯಫನೆಂಬವನು (Caiaphas.) 2. ರೋಮ ಸಾಮ್ರಾಜ್ಯದ ಚಕ್ರವರ್ತಿ: ಆಗಣವನ ಹೆಸರು ತಿಬೇರಿಯ (Tiberius) ಕೈಸರನೆಂದು. 3. ಯೆಹೂದ್ಯರ ಮುಖ್ಯವಾದೊಂದು ಹಬ್ಬ (Passover).

4ರೋಮುಕನ ಮನೆಹೊಗಲು ಮುಡಿಗೆಡುವೆವೆಂದಳುಕಿ
ಹೊರಗೆ ರಾಜಾಂಗಣದೊಳಾ ಯೆಹೂದ್ಯರು ತಳುವಿ,
ರಾಜಭಟರಿಂ ತಮ್ಮ ಮನವಿಯಂ ದೊರೆಗರುಹೆ,
ದೊರೆಯಾತನಂ ನ್ಯಾಯವೇದಿಕೆಗೆ ತರಪೇಳೆ,
5ಗಬ್ಬಥಕೆ ಬಂದ ನ್ಯಾಯಾಧಿಕಾರಿಯ ಮುಂದೆ ೨೦
ಯೇಸುವಂ ನಿಲಿಸಲಿದೊ 6ಜ್ಞಾನವೃಕ್ಷದ ಬಳಿಯೆ
ವೆಂಟಣಿಸಿ ಕುಳಿತದರ ಫಲನ ಮಲಲಾರದದ
ನಕ್ಕಜದೊಳೀಕ್ಷಿಸುವ 7ಹಳೆಯ ಹಾವೆನೆ, ಹೊನ್ನ
ಗದ್ದುಗೆಯನೇರಿ ಕುಳಿತಲ್ಲಿ ತನ್ನೆದುರಲ್ಲಿ
ನಿಂದ ಯೇಸುವ ನಿಟ್ಟಿಸಿದನಾ ಪಿಲಾತಂ. ೨೫

ಏನರಿವನಾ ರಜೋಮತಿ ರೋಮುಕಂ ತನ್ನ
ಮುಂದಿರುವ ಸತ್ವಮೂರ್ತಿಯ ಸತ್ವವನೊ? ಸತ್ಯ
ವಿಗ್ರಹನ ಸತ್ಯವನೊ? ನಿತ್ಯಸುಂದರನಾತ್ಮ
ಸೌಂದರ್ಯವನೊ? ಬಡಪನೀತಸೇತಕೆ ತನ್ನ
ಹುಟ್ಟು ಒಡಗಿಯ ಕೆಲಸ ಬಿಟ್ಟು ಹೊಸ ಧರ್ಮವಂ ೩೦
ಸಾರ್ವೆನೆಂದಿಂತಕಿಂಚನನಾಗಿ ದಿಸಕೊಂಡು
ಕೂಳಿಲ್ಲದಿಂತು ಕೃಶವಾಗಿರುವನೆಂದು ಕನಿ
ಕರಿಪನಲ್ಲವೆ, ದೇವಸುತನಿಂದ ಮೇಣನ್ಯ
ತ್ರೀಮುಂತನಿಲ್ಲ, ಬದುಕಿರುವಂದೆ ದೇವರಲಿ

---

4. Roman. 5. ಪಿಲಾತನ ಧರ್ಮಾಸನವಿರುವ ಕಲ್ಲು ಕಟ್ಟಣೆಗೆ (Pavement) ಇಬ್ರೀಯ ಭಾಷೆಯಲ್ಲಿ ಗಬ್ಬಥ (Gabbatha) ಎಂದು ಹೆಸರು. (John XIX. 13.) 6. Tree of knowledge. (Genesis II, 17.) 7. ಯೆಹೂದ್ಯರ ಪುರಾಣದಲ್ಲಿ ಹೇಳಿರುವ ಮೇರೆಗೆ ಸೃಷ್ಟಿಯ ಆದಿಯಲ್ಲಿ ಸರ್ಪರೂಪವನ್ನು ತಾಳಿ ಮನುಷ್ಯನನ್ನು ದುರ್ಬೋಧಿಸಿ ಪಾಪದಲ್ಲಿ ಕೆಡವಿದ ಸೈತಾನನೆಂಬ (Satan) ಅಸುರನು.

[8]ಸಾಯುಜ್ಯವಡೆಯೆ ಪಾತಕಿ ಮನವ ನೇರ್ವಡಿಸೆ
ಉಪವಾಸವೊಂದಲ್ಲದಿನ್ನಾವ ಪಥವಿಲ್ಲ
ವೆಂದು ಲೋಕಕೆ ಸಾರಲದನೆ ತಾನಾಚರಿಸಿ
ಬಡವಾದನಿವನೆಂದರಿವಸೆಂತು ರೋಮಕಂ?
ಮನೆಮಾರು ಮಾಡಿ ನೆಮ್ಮದಿಯಾಗಿ ಬಾಳದಿಂ
ತಲೆವನೇತಕೆ ಬೆಸದರೊಡನೆ, ಹರೆಯವನೇಕೆ
ಮುರಳಿನೊಂಟೆಯೊಲಿಂತು ದುಂದುಗೆಡಿಸುವನೆಂದು
ಮನದಿ ಹೀಗಳೆವನಲ್ಲದೆ, ಲೋಕವಿವನ ಮನೆ,
ಲೋಕರುದ್ಧಾರಣವೆ ಮನೆವಾರ್ತೆ, ಪಾಪದಿಂ
ಪಾಪಿಗಳನೆತ್ತೆ ಬಾಳ್ವೆಯ ತೆತ್ತ ಬೆಸದರೀ
ತನ ಬಳಗವಿಳೆಯ ಹೇರಿದ ಭಾರ ಹೊರುವ, ಸಂ
ಕಷ್ಟಗಳ ಮರುವ ದಾಂಟಿಸಿ ಪಾರಗಾಣಿಸುವ
ಒಂಟಿ ಇವನೆಂದಾ ಪಿಲಾತನಕಟರಿವನೇಂ?
ಇದೊ ಯೆಹೂದ್ಯದೊಳಿರುವ ದೇಸಿ ಪರದೇಸಿಯರ
ತನುಮನಧನಂಗಳಂ ಸೂರೆಗೊಂಡಕಟೊಂದು
ಕಣ್ಣ ಕೂಟಕೆ ದೊರೆಯದಾಕೆ, ತನ್ನೆನಿತೆನಿತೊ
ಹೊನ್ನಂಬುಗಳಿಗೆ ಗುರಿವಡದಾಕೆ, ರೋಮಿಯಾಯ
ಸಮ್ರಾಜನಿವಳನರಿವೊಡನೆ ತನ್ನರ್ಧಾಂಗಿ
ಮಾಡಿಕೊಳುವಾಕೆ, ಯೇಹೂದ್ಯದ [9]ಹೆಲೀನಳೆನಿಸಿ,
[10]ಕ್ಲೆಯೊಪಾತ್ರಳೆನಿಸಿ, ಮದನನೆನಿಸಿದಿಹ ಜಗಸ್ಮೋಹ
ನಾಸ್ತ್ರಮೆನಿಸಿ, ಪ್ರತ್ಯಕ್ಷ ರತಿಯೆನಿಸಿ ಜಸಂಬೆತ್ತ
[11]ಮಗ್ದಲದ ಮರಿಯಳೀ ಯೇಸುವಿಗೆ ಮನಸೋತು

---

8. Communion. 9. ಸ್ಪಾರ್ಟ (Sparta). ದೇಶದ ರಾಣಿ (Helena) 10. ಐಗುಪ್ತ (Egypt) ದೇಶದ ರಾಣಿ (Cleopatra) 11. Mary of Magdala.

ತನ್ನದೆಲ್ಲವ ಬಿಟ್ಟು ಬಡತನವನುಟ್ಟವನ
ಬೆಂಬಳಿಯ ತೊತ್ತಾಗಲಾಪ ಭಾಗ್ಯವಿದೆಂದು
ತುಟಿಗಚ್ಚಿ ನಿಟ್ಟುಸಿರ ಬಿಟ್ಟನಲ್ಲದೆ, ಸುಖದ
ವಿಮ್ಮಿಗಿಲಿನಿಂದಾಕೆ ಬೆಂದು ಮನಸೊಂದು ಭುಗಿ
ಭುಗಿಲ್ವ ಕಾವರಕೆ ದಾವರಿಸಿನ್ನು ಮರುಭುವಿಯ
ಹಕ್ಕಿಯೊಲು ನೀರರಸಿ ಬಂದಿವನ ತಣ್ಮುಡಿಯ
ನೀಂಟುತೀ ನಿತ್ಯಜೀವನದ ಬುಗ್ಗೆಯ ಬುಡದಿ
ಗುಣಕೆ ನಲ್ಲನ ಪ್ರೇಮಧರ್ಮದಾಸ್ಯವನಾಂತು
ತಂಗಿರುವಳಾ ಮರಿಯಳೀ ಪವಿತ್ರ ಪ್ರೇಮ
ವಲ್ಲರಿಯ ಪಿಕವೆಂದು ಬಲ್ಲನೆ ಪಿಲಾತಂ?

ಸಾಕೆನ್ನ ಮನಸೆ ನಮಗೇನಾತ್ಮತೃಪ್ತನಾ
ಶುಷ್ಕಹೃದಯನ ಬಗೆಯ ಗೊಡವೆ? ನೀನೆಮ ನೋಡ
ಲೋಕದುರುಪಾಪವಂ ಹೊತ್ತ ಕುರಿಮರಿಯಂತೆ,
ಗಿಡುಗಗಳ ನಡುವೆ ತೊಡರಿದ ಕಪೋತಕದಂತೆ
ನಿಂದಿರುವ ಮನುಜಸುತನಾ ಜಗದ್ರಕ್ಷಕನ!
ನರತನುವನಾಂತು ಮೂವತ್ತೆರಡೆ ವಯಸಂತೆ,
ಎರಡು ಸಾವಿರ ಕೆಯ್ಯ ಕಾಲನಳಸದ ಚೆಲುವ
ನರನೊ ನಾರಿಯೊ ಪೇಳಲಸದಳಂ—ಹೆಣ್ಮಗೆಯ
ನಯನದಿ ಭವಿಷ್ಯವಂ ತಿವಿವ ಪುರುಷನ ದೃಷ್ಟಿ,
ಹೆಣ್ಣೆದೆಯ ಮಾರ್ದವದಿ ಗಂಡಿನ ಮನೋದಾರ್ಢ್ಯ,
ತಾಯ ಲಲ್ಲೆಯೊ, ತಂದೆಯಕ್ಕರೆಯ ಜಂಕಣೆಯೊ!
ಪಾಪಪುರುಷನನಿರಿವ ಛಲ್ಲೆಯೊಲು ನೆಟ್ಟಗಿಹ
ನಿಡುಕನಂ ನೋಡ! ದಿವ್ಯಜ್ಞಾನದೇಕ್ಷಾಂತ
ದಾಡುಂಬೊಲವೊ ಪೃಥುಲಮವಲಿನ ಲಲಾಟವದೊ
ನೋಡ! ಮಾರನ ತರಿದ ನಿಡುವಾಳೊ ನಾಸಿಕವೊ

ನೋಡ! ಮೊಗತುಳುಕುವಾ ತಂಬೆಳಕೊ ಪ್ರೇಮಾಂಬು
ನಿಧಿಯನುಬ್ಬರಿಸುವಮೃತಾಂಶು ಕಾಂತಿಯೊ ನೋಡ!
ನೋಡ [12]ಗಲಿಲಾಯ ಸಾಗರದೊಲು ವಿಶಾಲ ವ
ಕ್ಷವನಂತೆ ಗಂಭೀರಮಂತೆ ಪ್ರೇಮಾಧಾನ
ಹೃದಯವಂ ನೋಡ! ವಜ್ರದ ಹರಳೊಳಡಕವಾ
ಗಿರುವ ದ್ರವಾಗ್ನಿಯಂತಾಫಾಲಗುಲ್ಫವಾ
ನಿಪ್ಪಟ ಬ್ರಹ್ಮಚರ್ಯದ ದೀಧಿತಿಯ ನೋಡ!
ನೋಡ ನೋಡಂದಿನಿಪ್ಪತ್ತು ಶತಕದ ಹಳೆಯ
ಕಾಲನಾ ಕನ್ನಡಿಯಿನಿಂದಿನೀ ಜವನಿಕೆಗೆ
ಪ್ರತಿಬಿಂಬಿಸುವ ಸೊಂಪ ಜಗದುಂಬಿಸುವ ಪೆಂಪ
ತನಗೆ ತಾನೆಣೆಯ ದೇವಾತ್ಮಜಾತನ ನೋಡ!
ಉಪನಿತು ನೋಡ, ಕಣ್ತುಂಬ ನೋಡೀಗಳಿದೊ
ಈ ಹರೆಯದೀ ಶೋಭೆಯೊ ಜಗತ್ಪ್ರೇಮದೀ
ಸುಜ್ಞಾನದೀ ಶಾಂತಿಯೊ ಮಹಿಮೆಯೊ ಜಿತಾ
ತ್ಮತೆಯೊ ತಪಃಶಕ್ತಿಯೊ ಧರ್ಮದೀ ಮನುಜ
ದೇವತನದೀ ಸುಧಾಸಿಂಧು [13]ಯೋರ್ದನಿನಂತೆ
ಸುರಿವುದಕಟಾ [14]ಮೃತಸಮುದ್ರದಲಿ ನೋಡ!
ಗದ್ದುಗೆಯಿನೆದ್ದಾಗಳಾ ಪಿಲಾತಂ ನೆರೆದ
ನೆರವಿಗಿಂತೆಂದನೀತನೊಳಾವ ತಪ್ಪಿವನ
ನೇಕೆ ತಂದಿರಿ? 'ದಂಡನೀಯನಲ್ಲದೆ ವೃಥಾ
ನಿನ್ನ ಬಳಿಗೀತನಂ ತಂದು ನಿನಗೊಪ್ಪಿಪೆವೆ?'
ಎಂದುದಾ ಮಂದಿ. 'ಆಂತಾದಡಿವನಿಗೆ ನಿಮ್ಮ

12. ಯೆಹೂದ್ಯದಲ್ಲಿರುವ ಒಂದು ಮಹಾಸರೋವರ (Sea of Galilee.) 13. ಯೆಹೂದ್ಯದಲ್ಲಿರುವ ಒಂದು ಹೊಳೆ (Jordan). 14. Dead Sea.

ದಂಡನೀತಿಯೊಳೆ ಶಿಕ್ಷೆಯ ವಿಧಿಸಲಾಗದೇಂ?'
'ಯೇಹೂದ್ಯರೆಮ್ಮಕಟ ಶಾಸನದಿ ವಧದಂಡ
ಕೆಡೆಯಿಲ್ಲ, ನಾವಾರನಾದೊಡಂ ಕೊಲಬಾರ
ದೆಂದೆ ಹನನೀಯನೀತ್ತನಿಲ್ಲಿಗೊಯ್ದು ರೋ
ಮಾಯ ಶಾಸನಕೊಪ್ಪಿಸಿಹೆವದಲ್ಲದೆ ಬಗೆಯ
ಲೆಂತೊ ಧರ್ಮದ್ರೋಹಿಯಂತೆ ರಾಜದ್ರೋಹಿ
ತಾನಿವಂ! ಕೈಸರಗೆ ತೆರಿಗೆಯಂ ತೆರಬಾರ
ದೆಂದು ಮಾಣಿಸಿದವಂ! ಯೇಹೂದ್ಯ ಜನಪದಕೆ
ತಾನೇಕರಾಜನೆಂದಮಮ ಸಾರುವನಿವಂ!
ರೋಮಾಯ ಚಕ್ರವರ್ತಿಯೆ ವಿನಾ ನಮಗನ್ಯ
ನೃಪನುಂಟೆ? ರೋಮರಾಜನೊಳಿಂತು ಮಾರ್ಮಲೆವ,
ಜನರ ಮಾರ್ಮಲೆಸುವೀ ಪರಿಯ ರಾಜದ್ರೋಹಂಸು
ಗೆಮ್ಮ ಬಡ ಧರ್ಮದಂಡವೆ ಸಾಕೆ? ಕೇಳವನ,
ತಾನಾರೆನುವನೆಂದು ಕೇಳೊಡೆಯ! ನಮ್ಮ ನುಡಿ
ನಂಬದೊಡೆ, ನಿನ್ನ ಕಿವಿಗಳ ನಂಬಲೊಲ್ಲೆಯೇಂ?'
ಆಂತವರೊಳೊಬ್ಬರಿಬ್ಬರು ತೊಡಗಿ ಬಳಿಕೆಲ್ಲ
ರೊಂದಾಗಿ ನರಿಗಳಂತೊದರಲಿತ್ತಧಿಕಾರಿ
ಯೇಸುವಂ ನೋಡುತ 'ಯೆಹೂದ್ಯರರಸನೊ ನೀನು?'
ಎಂದು ಕೇಳಲು, ಮನಸ್ಸಾಕ್ಷಿಯಂತಿನಿದಾಗಿ
ನೀನದನೆ ನುಡಿವೆಂದು ಯೇಸು ಕಿರುನುಡಿದಂ.
ಆಂತೆನೆ ಪಿಲಾತನಾತಗೆ 'ನಿನ್ನ ಜನಪದವೆ
ನಿನ್ನ ಯಾಜಕರಿನಗೆ ನಿನ್ನನೊಪ್ಪಿಸುವಂತೆ
ನೀನೇನ ಗೆಯ್ದೆ?' ಎನೆ, 'ನನ್ನ ರಾಜ್ಯವಿದಲ್ಲ,
ಈ ಲೋಕದಿಂದ ಬೇರೆಡೆಯೆ ಇದೆ' ಎಂದವಂ
ಮರುನುಡಿಯೆ, ಮರಳಿ 'ನೀನಿಂತೆನಲು ಅರಸನೇ?'

ಎನೆ ಪಿಲಾತಂ, 'ಕಾಲವದನೆ ನಿನ್ನಿಂದ ತಿರಿ
ತಿರಿಗಿ ನುಡಿಸುವುದೈಸೆ? ನನ್ನ ರಾಜತೆಗೊಂದೆ
ಸತ್ಯವನಿತರ ಸಾಕ್ಷಿ! ಸತ್ಯವೆನ್ನಯ ರಾಜ್ಯ!
ಸತ್ಯವನ್ನೀಡೇರಿಸುವ ರಾಜನಾಂ ಗಡಾ!'
ಎಂದನಾ ಯೇಸುವದಕಾ ಪಿಲಾತಂ ನಕ್ಕು
ಸತ್ಯವೆಂದೆಯ? ಸತ್ಯವೆಂದರೇನೆಂದುಸುರಿ,
'ಇದೊ ಯೆಹೂದ್ಯರೆ, ಇವನೊಳೇನುಮಪರಾಧವಂ
ಕಾಣೆ; ತಾನರಸೆಂದರೇನು? ತನ್ನಯ ರಾಜ್ಯ
ಈ ಲೋಕದಲ್ಲವೆನೆ, ಸಾರ್ವಭೌಮನಿಗೆಂತು
ಪ್ರತಿಯೋಗಿಯಹನಿವಂ? ವಿಧಿನೆ ಮತಣವನಿವಗೆ
ಕೆರಿದಾನುಮಪರಾಧವೆಲ್ಲಿ? ಮೇಣಿದೊ ಪಸ್ಕ
ಹಬ್ಬದೀ ದಿನದೊಳಪರಾಧಿಯೊರುವನ ಬಿಡಿಸಿ
ಕೊಳುವುದದು ನಿಮ್ಮ ಕಟ್ಟಳೆಯೈಸೆ? ಅದರಂತೆ
ಬಿಟ್ಟುಕೊಡಲೆ ಯೆಹೂದ್ಯರರಸನೀ ಯೇಸುವಂ?
ಯಾರನಾಯ್ವಿರಿ? ಕ್ರಿಸ್ತನೆಂಬುವೀ ಯೇಸುವನೊ?
ಮೊನ್ನೆ ದಂಗೆಯಲಿ ಕೊಲೆಗೆಯ್ದಾ [15]ಬರಬ್ಬನನೊ?'
ಎನೆ ಪಿಲಾತಂ, ನೆರವಿ ಬೊಬ್ಬಿರಿದುದೊಡನಿಂತು
'ಬಿಡಿಸಾ ಬರಬ್ಬನನೆ! ಬಿಡಿಸಾನ್ ಬರಬ್ಬನನೆ!'
'ಅಂತೆನೆ ಯೆಹೂದ್ಯರರಸನನಿವನ್ಗೇಂ ಗೆಯ್ವೆ?'
'ಗಲ್ಲಿಗೇರಿಸು! ಸಿಲುಬೆಗೊಡನೆ ಹಾಕೀತನಂ!'
ಎಂದೆದ್ದ ಕೋಲಾಹಲವ ಸಂತವಿಸಲವಂ
ಎನಿತೊ ಸಲ ಬಾಯೆತ್ತೆ ಮಾತೊಂದು ಕೇಳಿಸದೆ
ಗಲ್ಲಿಗೇರಿಸು! ಸಿಲುಬೆಗಿಕ್ಕೆಂಬ ಕಲಕಲವೆ
ಎದ್ದೆದ್ದು, ನಡುವೆ ತವಿವಂದು, 'ತಪ್ಪಿವನದೇಂ?

15. Barabbas.

ಮರಣದಂಡವನೀಯಲಿವನೊಳೇಂ ಕಾಣೆನಿದೊ
ಕೊರಡೆಯಂ ಬಡಿಸಿವನ ಬಿಡಿಸಿದಡೆ ಸಾಲದೇ?'
ಎಂದವನ ಮಾತಿಗೆ ಯೆಹೂದ್ಯರೆಲ್ಲರು ಕೆರಳಿ—
"ಏನೆಂದೆ?ರಾಜಘಾತಕನಿವನನಿಂತು ಬಿಡೆ,
ರಾಜೋಪಜೀವಿ ನೀನಲ್ಲ! ರಾಜದ್ರೋಹಿ
ಇವನ ನೀ ಕೊಲಿಸದಿರೆ ರಾಜಕರ್ಮವ ನಮಂ
ತೆಸಗಿದೆಯ? ಇನ್ನಿವನ ಜೀವದಿಂದಿರಲೀವ
ಕರುಣೆ ಏತರ ರಾಜನೀತಿ? ಯಾವಂ ಪಟ್ಟ
ರಾಜನಂ ರಾಜಸೆನಲೊಲ್ಲದಾನರಸೆನುವ
ನವಗೆ ಮರಣದಿನನ್ಯ ವಿಧಿಯೆ? ಮೇಣಂಥವನ
ಕೊಲದೆ ಕೊಲಿಸದೆ ಬಿಡುವನಾವನವನರಸನಿಗೆ
ಹಿತಶತ್ರುವಹನೊ ಮಿತ್ರನೊ ಬಗೆಯ! ಅಕಟೆಮ್ಮ
ಧರ್ಮಶಾಸ್ತ್ರದಿ ಮರಣದಂಡಕೆಡೆಯಿರೆ, ಪರರ
ಬಾಗಲಿಗೆ ನೀತಿಭಿಕ್ಷಿಗೆ ಬರುವೆವೇನಿಂತು
ನಿಮ್ಮ ನೀತಿಯಿನೆಮ್ಮ ಧರ್ಮವಂ ಕಾಯೆಂದು,
ನಿಮ್ಮೇಕಛತ್ರದೀ ನೆಳಲನೆಮಗೀಯೆಂದು
ಬೇಡುವೆವೆ? ಇನ್ನು ನೋಡೀಗ ಸಿಲುಕಿದನಿವನ
ಕನಿಕರಿಸಿ ಬಿಡೆ, ಡೊಂಬಿಗಾರನಿವನಂ ಮರಳಿ
ಹಿಡಿವುದೆನೆ ಸಾಧ್ಯವೇನಿನ್ನಿವಂ ಯೇಹೂದ್ಯ
ದಾ ತುದಿಯಿನೀ ತುದಿವರಂ ಕಾಟಕಾಯಿಗಳ
ನೆಚ್ಚಿಸದೆ ಬಿಡುವನೇನಂದು ಸಮ್ರಾಜನಿಗೆ
ಏನುತ್ತರವನೀವೆ? ಕಟ್ಟಿತಂದವನನಾಂ
ಬಿಟ್ಟೆನೆಂಬೆಯ? ನಿನ್ನ ಹಗೆಯವನನಾಂ ಬೆಳೆಯ
ಗೊಟ್ಟೆನೆಂಬೆಯ? ನಮ್ಮ ಜೋಕೆಯಂ ಬಗೆಯದೊಡೆ,
ನಿನ್ನ ಜೋಕೆಯನೆ ಮುಂಗಾದುಕೊಳು ಜೀಯಾ!'

ಇಂತವರ ಚಿನ್ನದೊರೆಯಿಂ ವಿಸುಕುವಸಿಧಾರೆ
ಯಂತೊರೆವ ನುಡಿಗಳಂ ಕೇಳುವ ಪಿಲಾತಗಾ
ತನ ಮಡದಿ—'ಇಂದೆ ಮುಂಜಾನೆ ಕನಸಾಂತು ನಾ ೧೮೦
ನತಿಸಂಕಟಂಬಟ್ಟೆ; ಮುಂಬೆಳಗ ಕನಸು ಬರಿ
ದಾಗದೀ ನಿರಪರಾಧಿಯ ತಂಟೆ ಬೇಡೆಮಗೆ'—
ಎಂದು ಸಂದೇಶವಂ ದೂತಮುಖದಿಂ ಕಳುಹೆ,
ಯೇಸುವಂ ಬಿಡೆ ತನಗೆ ಮನಸಿಮ್ಮಡಿಸಿದೊಡಂ,
ಬಿರುಗಾಳಿ ಹಿಗ್ಗಿಸೆ [16]ತಿಬೇರಿಯಾಂಬುಧಿಯಂತೆ ೧೮೫
ಭೋರ್ಗರಿವ ಜನಸಂದಣಿಯ ಕಂಡು ಮನಸು ಕಳ
ವಳಿಸೆ, ಕೈಸರ ತಿಬೇರಿಯನ ಹಿತಶತ್ರುವಾ
ನಹೆನೊ ಮಿತ್ರನೊ ಎಂದು ಝಳಪಿಸಿದ ಜಡಿನುಡಿಗೆ
ಮನದ ಧೈರ್ಯಂ ಬೆಳರೆ, ಯೇಹೂದ್ಯರೊಡನೆ ತನ
ಗೀ ಮುನ್ನಮಾದ ತಿಕ್ಕಾಟವಂ ನೆನೆದು, ಮೇ ೧೯೦
ಣದುವೆ ಸಮ್ರಾಜನೆಡೆಗಿವರಂದು ಮನವಿಯಂ
ಬರಕೊಂಡುದಂ ನೆನೆದು, ತನಗದೆ ತಿಬೇರಿಯಂ
ಪೋಗದಿರವರ ತಳ್ಳಿಗೆಂಪೆಚ್ಚರಿಸಿ ಬರೆಸಿ
ದೋಲೆಯೊಕ್ಕಣೆಯ ಕಟ್ಟಾಜ್ಞೆಯಂ ನೆನೆನೆನೆದು
ಮೆಯ್ಯ ಮುಳ್ಳೇಳೆ, 'ಧರ್ಮಾಂಧರೀ ಯೇಹೂದ್ಯ ೧೯೫
ರಿವರಿಗೀ ಯೇಸುವಿನೊಳಿರುವ ಧರ್ಮಾಸೂಯೆ
ಗಾಂ ದುಡುಕೆ ಗಂಡೋಲಿಗಳ ಗೂಡಿಗೆಸೆದ ಕ
ಲ್ಲಂತಾಗದಿರದು; ಮೇಣಿದುವೆ ನೆವಗೆಯ್ದಿವರು
ನಮ್ಮ ನೊಗದಿಂ ತಮ್ಮ ಬಿಡುಗಡೆಗೆ ಸೆಣಸಾಡೆ,
ನನ್ನೊಡೆತನದೊಳೀ ಯೆಹೂದ್ಯವಿಂತಕಟೆಮ್ಮ ೨೦೦

16. ತಿಬೇರಿಯ ಸಮುದ್ರ (Sea of Tiberias) ಎಂದು ಗಲಿಲಾಯ ಸಾಗರದ ಇನ್ನೊಂದು ಹೆಸರು.

ಕೈತೊಲಗೆ, ರೋಮುಸಾಮ್ರಾಜ್ಯದ ಜಗನ್ಮಹಿಮೆ
ಎಲ್ಲೆ? ರೋಮಿಯಾಯರೆ ಜಗಜ್ಜೇತರೆಂಬ ಪೆಂ
ಪೆಲ್ಲಿ? ರೋಮಿಯಾಯರಾಳಲು ಹುಟ್ಟಿದವರೆಂಬ
ನಮ್ಮ ಜಾತ್ಯಭಿಮಾನವೆಲ್ಲಿ? [17] ನಮ್ಮಿತಿಹಾಸ
ದೊಳಗೆನ್ನ ಹೆಸರನುಸುರುವರೆಂತು? ಸಾಕದಂ
ತಿರಲಿ, ಸಮ್ರಾಜನೆನಗೇನೆನುವನೆನ್ನ ಕೃಪೆ
ಯಂ ದ್ರೋಹವೆಂದೆಣಿಸನಿಹನೆ? ಮೇಣೀ ದೂರ
ನಲ್ಲಿವರೆಗಿವರೊಯ್ಯದಿಹರೆ? ಚಂಚಲಚಿತ್ತ
ನವನೆನ್ನ ಮರಳೆಂದಡಕಟೆನ್ನ ಪಾಡೇನು?
ಮುದಿಯ ಮೊಸಳೆಯ ಮಡುವಿಗಿನ್ನೊಮ್ಮೆ ಧುಮುಕುವೆನೆ?
ಹಳಗಿಪಡೆ ಹುಲಿಯ ಹಸಿವೆಗೆ ಹಸುವನೀವಂತೆ,
ಇವರ ನೆತ್ತರ ತೃಷೆಗೆ ನಿರ್ದೋಷಿ ಈತನ
ನ್ನೀಯುವುದೆ ನಿಶ್ಚಯಂ' ಎಂದವಂ ಬಗೆದು, ಮುಂ
ದಣ ಕಟಾಂಜನಕಯ್ದಿ, ನಿಂದ ಯೇಸುಗೆ ಬೆರಳ
ತೋರಿಸಿದೊ ನೋಡೀ ಮನುಷ್ಯನಂ, [18]ನೋಡಿರಿದೊ
ನಿಮ್ಮ ರಾಜನನೆಂದಡವರೇಕಕಂಠದಿಂ
ಗಲ್ಲಿಗೇರಿಸು ಸಿಲುಬೆಗೇರಿಸೀತನನೆಂದು
ಬೊಬ್ಬಿರಿಯೆ, 'ನಿಮ್ಮರಸನಂ ಗಲ್ಲಿಗೇರಿಸಲೆ?'
ಎನಲವಂ, 'ಕೈಸರನಿನನ್ಯ ನೃಪನೆಮಗಿಲ್ಲ!'
ಎಂದು ಗಲಭೆಯ ಮಾಡುತಬ್ಬರಿಸುವಾ ಗುಲ್ಲ
ಕಂಡಾತನಿನ್ನು ಯತ್ನಿಸೆ ನಿರರ್ಥಕವೆಂದು
ನಿರ್ಧರಿಸಿ ನೀರ ಬಟ್ಟಲ ತರಿಸಿ ಕೈಗಳ

17 But, Rome! 'tis thine alone with awful sway
To rule mankind and make the world obey.
(Dryden's Virgil: *Aeneid* VI 1173—4)
18 *'Ecce homo'*.

ನ್ನದರೊಳದ್ದಿಸಿ ತೊಳೆದು 'ನಿರಪರಾಧಿಯ ರಕ್ತ
ಕಿದುಗೊ ಹೊಣೆ ನಾನಲ್ಲ' ಎನಲೆಲ್ಲರೊಮ್ಮಿಗೆಯೆ
ಎಮ್ಮ ಮೇಲೆಮ್ಮ ಮಕ್ಕಳ ಮೇಲಿವನ ರಕ್ತ ೨೨೫
ವಿರಲೆಂದು ಸಂತೋಷದಿಂದಲಾರ್ಭಟಿಸಿದರು
ಹಿಂಡಲೆದು ಕತ್ತಲೆಯೊಳಂಡಲೆವ ಕುರಿಮರಿಯ
ಕಂಡುಬ್ಬಿ ತೋಳಗಳ ಗುಂಪೊಳುವಂತೆ.

ಇನ್ನು ತಳುವದೆ ಪಿಲಾತಂ ಯೇಸುವಿಗೆ ವಧ್ಯ
ನೆಂದು ಮರಣಾಜ್ಞೆಯಂ ವಿಧಿಸಿ, ಚಮ್ಮಟಿಗೆಯಿಂ ೨೩೦
ಬಡಿಸಿ, ಸಿಲುಬೆಯೊಳಿಕ್ಕಿರೆಂದು ರಾಣುವೆಯವರಿ
ಗವನನೊಪ್ಪಿಸಿ, 'ಯೆಹೂದ್ಯರ ರಾಜ [19]ನಜರೇತಿ
ನವನೇಸು' ಎಂದೊಂದು ಹಲಗೆಯಲಿ ಮೂಬರೆಹ[20]
ದಿಂ ಬರೆಸಿ ಸಿಲುಬೆಯೊಳದಂ ತೂಗಿರೆನೆ, ನೆರೆದ
ಯಾಜಕರ ಮಂದಿ ಸಿಬ್ಬೆರಗಾಗಿ 'ಏನಿದೇ ೨೩೫
ನಿಂತು ಬರೆಸಿದೆ?ಯೆಹೂದ್ಯರ ರಾಜನೀ ಯೇಸು
ವೆಂದು ಬರೆಸದೆ, ಯೆಹೂದ್ಯರ ರಾಜ ತಾನೆಂದ
ನೀತನೆಂದನಿತೆ ಬರೆಸಾ!' ಎಂದು ಬೇಡಿಕೊಳೆ,
ಬರೆದುದಂ ಬರೆದೆ ಗೆಯ್ದುದ ಗೆಯ್ದೆನೆಂದವಂ
ಹಿಂಗಡೆಯಿಸಿಳಿದು ಆರೋಗಣೆಗೆ ಹೋದಂ. ೨೪೦

ರಾಣುವೆಯರಿತ್ತ ಕಾವಲ ಮನೆಗೆ ಯೇಸುವಂ
ಕೊಂಡೊಯ್ದು, ಕಾವಲರ ದಳವೆಲ್ಲ ಸುತ್ತು ನಿಂ
ದಿರಲವನ ಬಟ್ಟೆ ಸೆಳೆತೆಗೆದು, ಕಿಸುಸೇಲೆಯಂ
ಹೊದಿಸಿ, ಮುಳ್ಳಿಂದ ಮಾಡಿದ ಮಕುಟವಂ ಮುಡಿಸಿ,

19. ಯೆಹೂದ್ಯರಲ್ಲಿರುವ ಒಂದು ಊರು (Nazareth); ಯೇಸು ಆ ಊರಿನೊಬ್ಬ ಯೋಸೇಫನೆಂಬ ಬಡಗಿಯ ಮಗನು. 20. ಗ್ರೀಕ್, ಲಾತಿನ್ ಮತ್ತು ಇಬ್ರೀಯ ಬರೆಹಗಳು.

ಬಲಗೆಯ್ಯೊಳೆಂದು ಬೆತ್ತವನಿತ್ತವನ ಮುಂದೆ
ಮೊಣಕಾಲನೂರುತ 'ಯೆಹೂದ್ಯರರಸನೆ ಸ್ವಸ್ತಿ!'
ಎಂದು ಗೊಳ್ಳನೆ ನಕ್ಕು ಮೂದಲಿಸಿ, ಮೊಗದಿ ತೂ
ಪಿರಿದದುವೆ ಬೆತ್ತದಿಂ ಬಡಿಯೆ, ಬಾಸುಳಿಗಳಿಂ
ಪ್ರೇಮದರುಣೋದಯವೊ, ನಿರ್ದೋಷನಿವನೆಂಬ
ಮೂಕಸಾಕ್ಷಿಯೊ ಎನಲು ಸೆತ್ತರೊಡಮೂಡಿದೊಡ
ಮವನೊಂದು ಮಾತನೆತ್ತಿಲ್ಲ! ಮಾ ಎಂದಿಲ್ಲ!
ಕಾಗೆಗಳ ಕೊತ್ತಳಂ ಕುಕ್ಕುವೆಳಕುಕಿಲಂತೆ,
ಕೆಂಡಗಳ ಕೋವೆಯಲಿ ಕಾವ ಕಾಂಚನದಂತೆ,
ಮಂಜು ಮುಸುಕಿರುವ ಬೈಗಿನ ಬೆಳ್ಳಿಯಂತೆ, ನೋ
ಡಿಲ್ಲ ಹಿಂಸೆಯನಂತು ಸಹಿಸಲವನಿನ್ನವಗೆ
ಹೊದಿಸಿದರುಣಾಂಶುಕವ ತೆಗೆದವನ ತೊಡಿಗೆಯನೆ
ತೊಡಿಸಿ, ವಧ್ಯಸ್ಥಾನಕಂದೆ ಸಿಲುಬೆಗೆ ಹಾಕ
ಲಿರುವೆರಡು ಕಳ್ಳರೊಂದಿಗೆ ಯೇಸುವಂ ನಡಸಿ
ಕೊಂಡೊಯ್ದರವರು. ನೋಡೆನಿತು ಬಲುಗುಂಪು! ನೋ
ಡೆನಿತು ಹೆಂಗಸರವನ ಬಳಿವಿಡಿದು ಎದೆಬಡಿದು
ಗೋಳಾಡುತಿರೆ ಕೇಳಿ ಮೊಗದಿರುಹಿ ಯೇಸುವಿಂ
ತೆಂದನವರ್ಗೆ—'ಯೆರೂಸಲೇಮ ದುಹಿತೆಯರಿರಾ!
ನನಗೆ ಗೋಳಾಡದಿರಿ; ನಿಮಗಾಗಿ ನಿಮ್ಮ ಮ
ಕ್ಕಳಿಗಾಗಿ ಗೋಳಾಡಿ! ಇದೊ ಬರುತಲಿವೆ ದಿನಂ,
ಧನ್ಯರೆನಿತಕಟ ಬಂಜೆಯರು! ಹೆರದಾ ಬಸಿರ್ಗ
ಳೆನಿತು ಧನ್ಯವೊ! ಧನ್ಯವೆನಿತೊ ಹಾಲೂಡಿಸದ
ಮೊಲೆಗಳೆಂಬುವ ದಿನಂ ಬರುತಲಿವೆ! ಅಂದಿಗೆಲೆ
ಬೆಟ್ಟಗಳೆ! ನಮ್ಮ ಮೇಲುರುಳಿರೆಲೆ ಗುಡ್ಡಗಳೆ!
ಮುಚ್ಚಿರಕಟಾ ನಮ್ಮನೆಂಬರಿದೊ! ಹಸುರೆಲೆಯೊ

ಳಿಂತಾಗೆ ತರಗೆಲೆಯೊಳೇನಾಗದಿಹುದು!' ೨೭೦
ಅಂದಿದೊ ವಸಂತಪೂರ್ಣಿಮೆಯ ಭೃಗುವಾರದಾ
ನಡುಹಗಲ ಸಿರಿಹೊತ್ತು, ಭಾಸ್ಕರನ ಸುಳಿವಿಲ್ಲ;
ನೋಡೊಂದೆ ಬರವೋಡ ಬಾನಗಲ ಚಾಚಿ [21]ಸೋ
ಹನ ಕಾಲದಾ ಪ್ರಲಯಮೇಘಮೆನೆ ಮುಚ್ಚಿಹುದು;
ಬೇಗೆಯಂ ತಡೆಯಲಾಗದು, ಗಾಳಿ ಸೂಸದಿಳೆ ೨೭೫
ಯುಬ್ಬಸದೊಳೇದುತಿದೆ, ಮರಗಳಲಿ ಕದಲದೆಲೆ,
ಹಕ್ಕಿಗಳ ಉಸುರಿಲ್ಲ; ನಟ್ಟಿರುಳೊಳಂತೆ ಮನೆ
ಮನೆಯೊಳುಸಿಕನೆ ಸಂತವಿರತಕ್ಕ ಜನಪದಂ
ಧಗೆಯ ಹೆಬ್ಬಾವಂತೆ ಹೊರಟು ತಿಂತಿಣಿವರಿದು
ಬಂತು ಶಲಭಸಮೂಹದಂತೆ ಯೇರೂಸಲೇಮ್ ೨೮೦
ನಗರದಗಸೆಯ ಹೊರಗಿರುವ ಕಪಾಲಸ್ಥಾನ
ವೆಂಬುವಾ ಗೊಲ್ಗೊಥಾ ಗಿರಿಗೆ. ಬಂದಿಗಳಿಂದ
ಹೊರಿಸಿ ತಂದಾ ಮೂರು ಸಿಲುಬೆಗಳ ನಟ್ಟರಾ
ಗೊಲ್ಗೊಥದ ಶಿಖರದಲಿ; ಯೇಸುವಂ ನಡುವೆ ಮೇ
ಣೆಡಬಲದೊಳಾ ಕಳ್ಳರಿಬ್ಬರಂ ಸಿಲುಬೆಗಳಿ ೨೮೫
ಗಿಕ್ಕಿ, ಕೈಕಾಲ್ಗಳಿಗೆ ಮೊಳೆ ಜಡಿದು, ಯೇಹೂದ್ಯ
ರರಸನೀ ನಜರಾಯ ಯೇಸುವೆಂದಾ ಬರೆದ
ಹಲಗೆಯಂ ತಲೆಗಡೆಗೆ ತೂಗಿದರು. ಹದ್ದು ಬಿಗಿ
ವಿಡಿದ ಲಾವಿಗೆಯಂತೆ, ಪಡುವಣದಿ ಬಿಳಿಯ ಬಿದಿ
ಗೆಯ ತಿಂಗಳಂತೆ, ಬಿಲ್ಲಿಗೆ ತೊಟ್ಟ ಸರಳಂತೆ, ೨೯೦
ಮರಣ ಪೃಕ್ಷದೊಳಮೃತಫಲದಂತೆ ತೂಗುತಿರೆ,
ತನ್ನ ಬೇನೆಯನಣಂ ಗಣಿಸದವನುಸುರಿದಂ—

21 ಯೆಹೂದ್ಯರ ಅತ್ಯಂತ ಹಿಂದಣ ಪೂರ್ವಿಕನಾದ ನೋಹ (Noah) ಎಂಬವನ ಕಾಲದಲ್ಲಿ ಆದ ಜಲಪ್ರಳಯ (Genesis VII)

ನರದೇಹವೆತ್ತವಸಿಗಾ ತನುವ ಗುಣಧರ್ಮ
ವಹ ಬೇಸೆ ಇಲ್ಲದಿಹುದೆಂತು? ತಾನಾರ ತನು
ಮನಮನಿನಿಸಾದೊಡಂ ನೋಯಿಸಿಲ್ಲೆಂದು ಸಾ
ವಿರ ಚೇಳ್ಗಳೊಮ್ಮಿಗಕಟಾ ಕಡಿವ ಯಾತನೆಯ
ಸಿಲುಬೆಯಳಲುರಿಯ ತಣ್ಣನೆ ತಳೆದು, ತಾಯ ಮೊಗ
ನೋಡೆ ಮಗು ಬೆಸಲಳಲನೋತು ಸೈರಿಸುವಂತೆ,
ಜೂಣಿಯ ಭಟಂ ಗಾಯದಳಲ ಲೆಕ್ಕಿಸದೆ ಮುಂ
ಗಾದಾಡಿ ಮಡಿದು ಜಯವಡುವಂತೆ, ನರನರಂ
ಗಳಲಿ ಕುದಿಕುದಿವ ವೇದನೆ ಸೋಸಿ, ತನ್ನ ತೊರೆ
ದರ್ಭಕರ ಹಂಬಲಿಸುವ ಮುಮೂರ್ಷು ತಾಯಂತೆ,
ತನ್ನ ಕಡಿವವರ್ಗೆ ತಣ್ನೆಳಲೀವ ಮರದಂತೆ,
ತನ್ನಳಲವನರ ಹಂಬಲದಿ ಮರೆತುಸುರಿದಂ—
'ಕ್ಷಮಿಸಿವರನೆಲೆ ತಂದೆ! ತಾವೇನನೆಸಗಿದಪೆ
ವೆಂದರಿಯರಿವರು.' ನೆರೆದವರದಂ ಕೇಳಿ, 'ಹಾ!
ನಮಗಾಗಿ ಕ್ಷಮೆಯ ಯಾಚಿಸುವುದಂತಿರಲಿ; ನೀ
ದೇವಸುತನಾಗಿದ್ದರೀ ಸಿಲುಬೆಯಿಂದಿಳಿದು
ಬಾರ ನೋಡುವ!' ಎಂದು ಜಟಕರಿಸೆ, ಯಾಜಕರು
'ಅನ್ಯರಂ ರಕ್ಷಿಸಿದಿವಂ ತನ್ನ ತಾನೆ ರ
ಕ್ಷಿಸಲಾರನಾದನೆ? ಯೆಹೂದ್ಯರರಸಂತೆ! ತಾ
ನಿಳಿತರಲಿ ಸಿಲುಬೆಯಿಂದೊಡನೆ ನಂಬುವೆವಿವನ!
ದೇವರೊಳೆ ಭರವಸಿಗನಂತೆ! ಕಾಂಬೆವು ದೇವ
ರೀತನಂ ರಕ್ಷಿಸಲಿ! ದೇವಸುತ ತಾನೆಂದ
ನಲ್ಲ?" ಎಂದಣಕಿದರು.

ಅನಿತರೊಳೆ ಬಿರುಗತ್ತ
ಲೊಂದು ಬಾನೆಲ್ಲವಂ ಬಾಸಣಿಸಿ, ದೇವಸುತ

ನಮೃತನೀ ಮೃತಿನಾಟಕದ ಕಡೆಯ ತೆರೆಯಂತೆ
ಭೂವ್ಯೋಮಗಳ ನಡುವೆ ಮುಸುಕಿದುದು. ಸೂರ್ಯೋಪ
ರಾಗಮೇನಿಂದು ಹುಣ್ಣಿಮೆಯೊಳೆನೆ ನಕ್ಷತ್ರ
ವೊಂದಿಲ್ಲ. ಮಳೆಯ ಕತ್ತಲೆಯೊ? ಕತ್ತಲ ಮಳೆಯೊ? ೩೨೦
ಅಲ್ಲಡೆ ನಭೋಗ್ನಿಮುಖಿಯಿಂದುಗುವ ಕಬ್ಬೊಗೆಯೊ?
ಮಿಸ್ರದೊಂಬತ್ತನೆಯ[22] ಮಾರಿ ತಲೆದೋರಿತೇ?
ಹಗಲ ಮೂರನೆಯ ಜಾಮದೊಳೆ ಹಗಲಿನ ದೀಪ
ವಾರಿತೇನೆಂದು ನೆರೆದವರೆಲ್ಲರೆದೆ ನಡುಗೆ,
ಸಿಲುಬೆಯೊಳೆಲೀ! ಎಲೀ! ಲಮ್ಮಾ ಸಬಖ್ತಾನಿ? ೩೨೫
(ದೇವರೇ! ದೇವರೇ! ಯಾಕೆನ್ನ ಕೈಬಿಟ್ಟೆ?)
ಎಂದು ದಾವೀದ ನೃಪನಂದಿನಾರ್ತಧ್ವಾನ[23]
ದಿಂದರಚೆ ಯೇಸು, ನಿಂದವರಲ್ಲಿ ಕೆಲವರಿವ
ನೇಲೀಯನಂ[24] ಕರೆವನೇಲೀಯನೇಂ ಬಂದು
ಕಾದಪನೊ ಕಾಂಬೆವೆನೆ, ಮೇಘನಿರ್ಘೋಷದಿಂ ೩೩೦
"ತಂದೆಯೆ! ಮದಾತ್ಮವಂ ನಿನ್ನ ಕೈಗೊಪ್ಪಿಸುವೆ!"
ಎಂದು ಗಗನದಿ ಯೇಸು ಕಣ್ಣೂರಿ, ತುದಿಬಿಟ್ಟ
ದಿಂ ಕರೆವ ತಾಯೆಡೆಗೆ ಮರಿಜಿಂಕೆ ಜಿಗಿವಂತೆ,
ಸುಗ್ಗಿಯೆಡೆಗಯ್ದುವಾ ಬಾನಕ್ಕ್ರಿಯಂತೆ, ದಿನ
ಮುಖದೊಳಿರುಳಿನ ಸೊಡರು ನೇಸರಂಬುಗುವಂತೆ, ೩೩೫
ಕ್ಷಿತಿಜದಿಂ ಸಿಡಿದು ಮೇಲ್ನೆಗೆವ ಮಿಂಚಂತೆ, ಯೇ
ಸುವಿನಾತ್ಮವೊಡನೆ ಬೆಳಕಿನ ಬೀಡಿಗಯ್ದೆ, ನಿಲು

22 ದೇವರು ಮಿಸ್ರದೇಶಕ್ಕೆ (Egypt) ಕಳುಹಿಸಿದ ಹತ್ತು ಮಹಾ ಮಾರಿಗಳಲ್ಲಿ ಒಂಭತ್ತನೆಯದು ಮೂರುದಿನಗಳ ಕಗ್ಗತ್ತಲೆ (Exodus X 22). 23 ಯೆಹೂದ್ಯರ ಅರಸನಾದ ದಾವೀದನ ಕೀರ್ತನೆ (Psalms XXII. I.) 24 ಎಲೀಯನೆಂಬ ಯೆಹೂದ್ಯರ ಒಬ್ಬ ಪ್ರವಾದಿ.

ನೇಸರುಗಳೆಡೆಗಯ್ದೆ, ಕಣ್ಮುಗಿದು ತಲೆವಾಗಿ,
ತನ್ನ ಪಡೆದೆರವನೊಡೆಯಂಗೆ ಮರಳೀಪಂತೆ
ತನ್ನ ತಂದೆಗೆ ಯೇಸುವಸುವನೊಪ್ಪಿಸಿದಂ. ೩೪೦

ಗಡಗಡನೆ ಭೂಮಿ ನಡುಗಿತು, ದುಃಖವಾರ್ತೆಯಂ
ಜಗಕೆಲ್ಲ ಕೇಳಿಸುವ ಮರಣದುಂದುಭಿಯಂತೆ,
ನೆರೆದರೆದೆಯೆದೆ ಭೀತಿಯಿಂದ ಮಾರ್ಮೊಳಗಿದುದು.
ಕಾವಲಿನ ರೋಮಕ ಶತಾಧಿಪತಿ ಕುದುರೆಯಲಿ
ಜೂಗಳಿಸೆ, ಕಳಗಿಳಿದು ಸೀಸಕಂ ತೆಗೆದಿವಂ ೩೪೫
ದೇವತನಯಂ ಗಡಾ! ಎಂದು ವಿಸ್ಮಯದೊಳಾ
ಹಗಲ ತಿಂಗಳನೆ ಎವೆಯಿಕ್ಕದೀಕ್ಷಿಸಿದಂ.

* * * * *

ಮೆಲ್ಲಮೆಲ್ಲನೆ ತೆಗೆದುದಾ ಕತ್ತಲಾ ಮೋಡ,
ಸುಳಿದುದೆಳೆಗಾಳಿ, ಮುಚ್ಚಿದ ಕೋಳಿ ಹೊರಹೊಂಚಿ
ಮುಂಬೆಳಕೊಳಂತೆ ಕೂಗಿತು, ಹಕ್ಕಿಗಳ ಹಿಂಡು ೩೫೦
ಗೂಡುಗೂಡಿಂದ ಹೊರಸೂಸಿತರೆಮೇವಿನೊಳೆ
ಕಂಗೆಟ್ಟ ಮಂದೆಯೊಟ್ಟಾಗಿ ಮರಳಿತು ಮನೆಗೆ.
ಅಂತು ಹಗಲಿನ ರಾತ್ರಿ ಪಾಳೆಯಂ ತೆಗೆಯೆ, ಪಡು
ವಣದಿ ರವಿ ಮೂಡಿ, ತನ್ನೆದುರಿನೊಳೆ ಪಡುವೊಗಂ
ಗೊಂಡು ಧರ್ಮಪತಾಕೆಯಂತೆ ನಡುಸಿಲುಬೆಯಲಿ ೩೫೫
ಚಾಚಿದಪರಾರ್ಕನಂ ಕಂಡು ತಾನಸ್ತಮಿಸ
ಲಲ್ಲಿ ನೆರೆದವರೆಲ್ಲ ಕತ್ತಲೆಯ ದಂಡೆಯಿಂ
ಹಿಂಡೆದ್ದ ಕೊಕ್ಕರೆಗಳಂತೆ ಗೊಲ್ಗೊಥದಿಂದ
ಮನೆಗೆ ತೆರಳಿದರಲ್ಲಿ ಸದ್ದಿಲ್ಲ, ಸುಳಿವಿಲ್ಲ.

* * * * *

ಮೂಗುಹರಕಾವ ಹಳೆಯೊಂದು [25]ತಲೆಬುರುಡೆ ನಡು
ಸಿಲುಬೆಯಡಿಯಿಂ ಜಗವ ಬಾಯ್ಕಿಸಿದು ನಗುತಲಿದೆ.
ಕೆಯ್ಯ ಭಲ್ಲೆಯದೊಬ್ಬನಾ ಜಾಮದ ಪ್ರಹರಿ
ಸಿಲುಬೆಗಳ ಮುಂಗಡೆಯೊಳತ್ತಿತ್ತ ಶತಪದಂ
ಗೆಯ್ದು ತನ್ನಯ ಬಾರಿ ಮುಗಿವ ಹೊತ್ತಂ ಕಾದು
ಗಳಿಗೆಗಳನೆಣಿಸುತಿಹನಾದಡಾ ಗಿರಿಯಿಂದ ೩೬೫
ಲನತಿದೂರದೊಳೊಂದುದುಂಬರದ ನೆರಳಲ್ಲಿ
ಮೆಯ್ಮರಸಿ ಕುಳಿತಿಹಳು ಕಡೆಮುಗಿಲ ಮಳೆವಿಲ್ಲ
ನೀಕ್ಷಿಸುವ ನವಿಲಂತೆ ನಡುಸಿಲುಬೆಯೊಳೆ ನಟ್ಟ
ನಯನಗಳ ಮಗ್ದಲದ ಮರಿಯೆ—ದಾವೀದಕುಲ[26]
ದಾದಿತ್ಯನ ನವಪ್ರಬೋಧನದ ಮುಂಗೋಳಿ. ೩೭೦
ಗೊಲ್ಗೊಥಕೆ ಬಹ ರಾಹುಮುಕ್ತಂ ಸುಧಾಸೂತಿ
ಬೆಳ್ಗೊಡೆಯನಮೃತನಾ ಮೃತಮೂರ್ತಿಗೆತ್ತಿಹಂ;
ಮುನ್ನ ಕೀರ್ತಿಯ ಹಾಲ ಹೊನಲಂತೆ, ತಾನನ್ನೆ
ಗಂ ಬೀರಿದಕ್ಕರೆಯ ಬಲೆಯಂತೆ, ಬೋಧಿಸಿದ
ನಿತ್ಯಜೀವನದ ಧವಳಿಮೆಯಂತೆ, ತನ್ನಾತ್ಮ ೩೭೫
ದಮೃತತ್ವದಂತೆ ವಿಸಟಂಬರಿಯೆ ಬೆಳದಿಂಗ
ಳೆತ್ತಲುಂ ನಿಷ್ಪಂದಮೆತ್ತಲುಂ ಶಾಂತಂ.



---

25. . . . . and lo, thy foot
Is on the skull which thou hast made.
(In Memoriam)

26 ಯೆಹೂದ್ಯರ ಅರಸರಂಲ್ಲಿ ಅತ್ಯಂತ ಶ್ರೇಷ್ಠನಾದ ದಾವೀದನ ವಂಶದಲ್ಲಿ ಯೇಸು ಹುಟ್ಟಿದನೆಂದು ತಿಳಿಯುತ್ತದೆ. (Matthew I, 1.)

091644

Good Friday, 26th March 1937.

ಧಾತೃ ಸಂ। ಫಾಲ್ಗುಣ ಪೂರ್ಣಿಮೂ, ಶುಕ್ರವಾರ.